**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು  ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಲಯ, ರಾಣೇಬೆನ್ನೂರು.**

**C.C No.960/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮಾಲತೇಶ ತಾವರಗೊಂದಿ | *P.W-2* |
| ತಂದೆಯ ಹೆಸರು | – | ನಿಂಗಪ್ಪ | *C.W-3* |
| ವಯಸ್ಸು | – | 29 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಆರೇಮಲ್ಲಾಪುರ | |

**ದಿನಾಂಕಃ 03–01–2024 ರಂದು ಸಾಕ್ಷಿದಾರರನ್ನು ಕರೆಯಿಸಿ  ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನನಗೆ ಚಾ.ಸಾ–2 ನಿಂಗಪ್ಪ ಬಸಪ್ಪ ತಾವರಗೊಂದಿ ರವರ ಪರಿಚಯ ಇದೆ.  ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು , ಸದರಿ ದಾಖಲೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿ.ಪಿ–6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು  ನಿ.ಪಿ–6(ಎ) ಎಂದು ಗುರುತಿಸಲಾಯಿತು. ಸದರಿ ನಿ.ಪಿ–6 ರ ಸ್ಥಳ ಪಂಚನಾಮೆಗೆ ಸುಮಾರು ನಾಲ್ಕು ಅಥವಾ ಐದು ವರ್ಷಗಳ ಹಿಂದೆ ಸಂಜೆ  5.00 ಗಂಟೆ ಸಮಯದಲ್ಲಿ ಆರೇಮಲ್ಲಾಪುರ ಗ್ರಾಮದ ಚಳಗೇರಿ ರಸ್ತೆಯ ಬಳಿ ಇರುವ ಹೊಲದಲ್ಲಿ ಹಾಕಿದ್ದೇನೆ. ಪೋಲಿಸರು ನನ್ನ ಸಮಕ್ಷಮದಲ್ಲಿ ಒಂದು ಮೋಟಾರ್ ಸೈಕಲ್  ನ್ನು

ಅಮಾನತ್ತು ಪಡಿಸಿಕೊಂಡಿದ್ದಾರೆ ಆದರೆ ನನಗೆ ಮೋಟಾರ್ ಸೈಕಲ್ ನ ನಂಬರ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು , ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ದಿಃ 26-03-2019 ರಂದು ಬೆಳಿಗ್ಗೆ 10.15 ರಿಂದ 11.00 ಗಂಟೆ ಸಮಯದಲ್ಲಿ ನನ್ನ ಮತ್ತು ಚಾ.ಸಾ-2 ನಿಂಗಪ್ಪ ಬಸಪ್ಪ ತಾವರಗೊಂದಿ ರವರ ಸಮಕ್ಷಮದಲ್ಲಿ ಪೋಲಿಸರು ಸ್ಥಳ ಪಂಚನಾಮೆ ಜರುಗಿಸಿದ್ದಾರೆ ಎಂದರೆ ಸರಿ. ಸದರಿ ಸ್ಥಳ ಪಂಚನಾಮೆಯ ಸ್ಥಳವನ್ನು 1 ನೇ ಆರೋಪಿ ಮಧು (ಮೃತ) ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಸದರಿ ನಿ.ಪಿ-6 ರ ಸ್ಥಳ ಪಂಚನಾಮೆಯ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ನಿ.ಪಿ-6 ರ ಸ್ಥಳ ಪಂಚನಾಮೆಯ ಸಮಯದಲ್ಲಿ ಪೋಲಿಸರು ಒಟ್ಟು ನಾಲ್ಕು ಪೋಟೋಗಳನ್ನು ತೆಗೆದಿದ್ದಾರೆ. ಸದರಿ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಗುರುತಿಸುತ್ತೇನೆ. ಅವುಗಳು ಈಗಾಗಲೇ ನಿ.ಪಿ-2 ರಿಂದ ನಿ.ಪಿ-5 ಎಂದು ಗುರುತಿಸಲಾರುತ್ತವೆ.

ಮುಂದುವರೆದ ಪಾಟೀ ಸವಾಲಿಗೆ ಎಪಿಪಿ ರವರು ಸಮಯ

ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.